ಭಾರತ ಗಣರಾಜ್ಯ ಚಿರಾಯುವಾಗಿರಲಿ

Regd No B G 165 ಗಣರಾಜ್ಯೋತ್ಸವ ಸಂಚಿಕೆ 26-1-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂಭ್ರಮಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಜಾತಿಯತೆ ಸಂಕುಚಿತ ಮನೋಭಾವ ಬಿಡಲು ಗಿರಿಯವರ ಕರೆ

ಬಡತನದಿಂದ ಅನಾರೋಗ್ಯ

ಆರೋಗ್ಯ ಅನೇಕ ಸನ್ನಿವೇಶಗಳನ್ನು ಅವಲಂಬಿಸಿದೆ. ಬಡತನ ಮಾನವ ಜನಾಂಗಕ್ಕೇ ಒಂದು ಅಭಿಶಾಪ. ಜನತೆಯನ್ನು ಸುಧಾರಿಸುವಷ್ಟು ವಸ್ತುಗಳನ್ನು ತಯಾರಿಸಲು ಜಗತ್ತು ಸಾಮರ್ಥ್ಯ ಗಳಿಸಿದೆ. ಪ್ರಪಂಚದ ಬೇರೆಬೇರೆ ರಾಷ್ಟ್ರಗಳಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ವೈಜ್ಞಾನಿಕ ಪ್ರಗತಿಯಿಂದ ಸಾಧ್ಯವಾಗಿದೆ. ಆದರೂ ಅನೇಕ ದೇಶಗಳು ಜೀವನ ಮಟ್ಟವನ್ನು ಮುಟ್ಟಲ್ಲ. ಬಡತನ ಜನತೆಯ ಅನಾರೋಗ್ಯ ಮತ್ತು ಅಸಂತೋಷಕ್ಕೆ ಕಾರಣವಾಗಿದೆ ಆರೋಗ್ಯ ಸುಧಾರಣೆಯೇ ಈ ದೇಶಗಳಲ್ಲಿ ಈಗ ಅತ್ಯಗತ್ಯವಾಗಿದೆ. ಪಶ್ಚಿಮ ದೇಶಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಯೋಜನೆಗಳನ್ನು ಕೈಗೊಳ್ಳುವಂತೆಯೇ ಆರೋಗ್ಯ ಸುಧಾರಣಾ ಯೋಜನೆಗಳನ್ನು ಕೈಗೊಳ್ಳಬೇಕು. ಹೀಗಾದರೆ ಅವು ಯಶಸ್ವಿ ಯೋಜನೆಗಳಾಗುವುವು. ಆರ್ಥಿಕ ಅಭಿವೃದ್ಧಿ ಕಾರ್ಯ ಯೋಜನೆಗಳು ಯಶಸ್ವಿಯಾಗಲು ಮುಖ್ಯತಃ ಆರೋಗ್ಯ ಸುಧಾರಣಾ ಯೋಜನೆಗಳ ಯಶಸ್ವಿಯನ್ನು ಅವಲಂಬಿಸಿದೆ.

ಸಂತರ ನಿರಾಕರಣೆ

ಇಂದಿನಿಂದ ಉತ್ಸವಾಪ ಪ್ರಾರಂಭಿಸುವುದನ್ನು ನಿಲ್ಲಿಸಬೇಕೆಂದು, ಆತ್ಮಾರ್ಪಣೆ ನಡೆಸಕೂಡದೆಂದು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಮಾಡಿಕೊಂಡ ಮನವಿಯನ್ನು ಸಂತ ಫತೇಸಿಂಗರವರು ನಿರಾಕರಿಸಿರುವರು.

ಭಾರತದ 21 ನೇ ಗಣರಾಜ್ಯೋತ್ಸವದ ಹಿಂದಿನ ರಾತ್ರಿ ರಾಷ್ಟ್ರಪತಿ ಶ್ರೀ ವಿ. ವಿ ಗಿರಿಯವರು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡುತ್ತಾ, ಜನತೆಗೆ ಅಭಿನಂದಿಸಿ ಭವಿಷ್ಯದಲ್ಲಿ ಶುಭಹಾರೈಕೆ ಮಾಡಿದರು.

ಗಾಂಧೀಜಿಯವರ ನೇತೃತ್ವದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ದುಡಿದು ಹುತಾತ್ಮರಾದವರನ್ನು ಸ್ಮರಿಸಬೇಕೆಂದು ತಿಳಿಸಿದ ರಾಷ್ಟ್ರಪತಿಯವರು ರಾಜಕೀಯ ಸ್ವಾತಂತ್ರ್ಯ ಅರ್ಥವತ್ತಾಗಿರಬೇಕೆಂದು ನುಡಿದರು.

ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿರುವುದನ್ನು ರಾಷ್ಟ್ರಪತಿಯವರು ಪ್ರಸ್ತಾಪಿಸಿ ಕೈಗಾರಿಕೆ ಅಭಿವೃದ್ಧಿ ಇನ್ನೂ ಆಗಬೇಕೆಂದರು.

ಆರ್ಥಿಕ ಕ್ಷೇತ್ರ ಅಭಿವೃದ್ಧಿ ಆಗಬೇಕೆಂದು ಅವರು ತಿಳಿಸಿ, ಗ್ರಾಮ ಹಾಗೂ ಪಟ್ಟಣಗಳೆರಡರಲ್ಲೂ ಜನತೆಯಲ್ಲಿ ಆರ್ಥಿಕ ಅಂತರ ಹೋಗಬೇಕೆಂದರು

ರಾಷ್ಟ್ರಪತಿಯವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಜಾತಿಯತೆ ಪ್ರಾಂತಿಯತೆ ಸಂಕುಚಿತ ಮನೋಭಾವನವನ್ನು ಜನತೆ ತ್ಯಜಿಸಿ ರಾಷ್ಟ್ರದ ಅಭಿವೃದ್ಧಿಯತ್ತ ನಿರತರಾಗಬೇಕೆಂದು ನುಡಿದರು.

ಗಾಂಧೀಜಿ ಶತಮಾನೋತ್ಸವ ವರ್ಷದಲ್ಲಿ ಕೋಮುವಾರು ಗಲಭೆ ಆದುದು ಅವಮಾನಕರವೆಂದು ರಾಷ್ಟ್ರಪತಿಯವರು ತಿಳಿಸಿದರು

ಕೆಲಸ ಇಂಜಿನಿಯರು ಮತ್ತು ವಿಜ್ಞಾನಿಗಳಿಗೆ ಪ್ರೋತ್ಸಾಹಿಸಬೇಕೆಂದು ಅವರು ತಿಳಿಸಿದರು.

ಚಂಡಿಗರ ಮಾತುಕತೆ

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನಿನ್ನೆ ದೆಹಲಿಯಲ್ಲಿ ರಾಜಕೀಯ ಪಕ್ಷಗಳ ನಾಯಕರೊಡನೆ ಚಂಡಿಗರ ಕುರಿತು ಮಾತುಕತೆ ನಡೆಸಿದರು. ವಿರೋಧಿ ಕಾಂಗ್ರೆಸ್, ಸ್ವತಂತ್ರ ಪಕ್ಷ, ಜನಸಂಘ, ಎಸ್ ಎಸ್ ಪಿ ನಾಯಕರು ಸಭೆಯಲ್ಲಿ ಹಾಜರಿರಲಿಲ್ಲ.

○

ಗಿರಿಯವರ ಕರೆ

ಗಾಂಧಿ ಶತಾಬ್ದಿ ಅಂತರ್ರಾಷ್ಟ್ರೀಯ ಪಾನಪ್ರತಿಬಂಧ ಸಮ್ಮೇಳನವನ್ನು ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ದೆಹಲಿಯಲ್ಲಿ ನಿನ್ನೆ ಉದ್ಘೋಷಿಸಿ ಭಾಷಣಮಾಡುತ್ತಾ, ಪಾನ ಮಾಡುವುದರ ವಿರುದ್ಧ ಬಲವಾದ ಅಭಿಪ್ರಾಯ ಕೂಡಿಸಬೇಕೆಂದರು. ಶ್ರೀ ಮುರಾರ್ಜಿ ದೇಸಾಯರು ಭಾಷಣ ಮಾಡುತ್ತಾ ಔಷಧಿಗಳಿಗೆ ಮಾದಕ ಪದಾರ್ಥಗಳನ್ನು ಬಳಕೆ ಮಾಡುವುದನ್ನು ಕಾನೂನು ಮೂಲಕ ನಿಷೇಧಿಸಬೇಕೆಂದು ತಿಳಿಸಿದರು.

○

ಜಾಕ್‌ಪಾಟ್

ಕಳೆದ ಶನಿವಾರ ಕಲ್ಕತ್ತಾ ಕುದುರೆಯ ಪಂದ್ಯದಲ್ಲಿ ಒಂದು ಟಿಕೆಟ್‌ಗೆ ಜಾಕ್‌ಪಾಟ್‌ನಲ್ಲಿ ರೂ. 169236 ದೊರೆಯಿತು

●

ಜನಸಂಖ್ಯೆ ಮಿತಿ

ಬೆಂಗಳೂರು ಪ್ರಜಾಸಂಖ್ಯೆ 30ಲಕ್ಷಕ್ಕೆ ಮಿತಿ ಆಗಬೇಕೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಿಳಿಸಿರುವರು

1 ಲಕ್ಷ ಸತ್ಯಾಗ್ರಹಿಗಳು

ಫೆಬ್ರವರಿ 20ರಂದು ಪ್ರಾರಂಭವಾಗುವ ತೆಲಂಗಾಣಾ ಚಳುವಳಿಯಲ್ಲಿ 1 ಲಕ್ಷ ಜನ ಭಾಗವಹಿಸುವರು

○

ಗೋ ರಕ್ಷಣೆ

ಮಂಗಳೂರಿನ ಬಿಜ್ಜಾನಲ್ಲಿ ಭಾವಿಗೆ ಬಿದ್ದಿದ್ದ ಹಸುವನ್ನು ಸುರಕ್ಷಿತವಾಗಿ ಈಚೆಗೆ ತೆಗೆದು ಅದರ ಮಾಲೀಕನಿಗೆ ಇತ್ತರು.

★

ದಿವ್ಯವಾಣಿ

ನಿನಗೆ ಒಳ್ಳೆಯದನ್ನು ಬಯಸುವ ಸ್ತ್ರೀಗಿಂತ ಕೇಡು ಬಯಸುವ ಪುರುಷನೇ ಉತ್ತಮ — ಎಕ್ಲೆಸಿಯಾಸ್ಟೆಸ್

○

ವಿಗ್ರಹ ಪತ್ತೆ

ಹದಿನೇಳು ಹಾಗೂ ಹದಿನೆಂಟನೆ ಶತಮಾನದ ಶ್ರೀರಾಮ ಹಾಗೂ ಸೀತಾದೇವಿ ವಿಗ್ರಹಗಳು ಸಯೀದಾಬಾದು ಕಾಲುವೆಯನ್ನು 5 ಅಡಿ ಆಳ ಅಗೆಯುತ್ತಿದ್ದಾಗ ಸಿಕ್ಕಿವೆಯೆಂದು ಹೈದರಾಬಾದು ವಾರ್ತೆ ಜನರು ಪೂಜೆ ಪ್ರಾರಂಭಿಸಿರುವರು ದೇವಾಲಯ ನಿರ್ಮಾಣಕ್ಕೆ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ

○

ಶುಭಾಶಯಗಳು

21 ನೇ ಗಣರಾಜ್ಯೋತ್ಸವ ಸಂದರ್ಭದಲ್ಲಿ ಸಮಸ್ತರಿಗೂ " ಸತ್ಯವಾದಿ " ಶುಭಾಶಯಗಳನ್ನು ಕೋರುತ್ತದೆ.

★

"Bank Road Bahusar – A Fair Price Shop in Actual Practice"

ಆರೋಗ್ಯ ಕೇಂದ್ರಗಳು

ಭಾರತದಲ್ಲಿ ಆರೋಗ್ಯ ಕೆಳಮಟ್ಟದಲ್ಲಿರುವುದಕ್ಕೆ ಅನೇಕ ಕಾರಣಗಳಿವೆ. ಇದಕ್ಕೆ ಆರೋಗ್ಯ ಸೌಲಭ್ಯದ ಅಭಾವ, ಆಹಾರಾಭಾವದಿಂದ ಅಶಕ್ತತೆ, ವಸತಿ ಹಾಗೂ ಸುರಕ್ಷಿತ ನೀರು ಸರಬರಾಜಿನ ಅಭಾವ, ವೈದ್ಯ ಸೇವೆಯ ಅಭಾವ, ಅಲ್ಪ ವರಮಾನ ಹಾಗೂ ಆರೋಗ್ಯ ಶಿಕ್ಷಣದ ಅಭಾವ ಮುಂತಾದ ಕಾರಣಗಳಿವೆ. ದೇಶದ ಆರ್ಥಿಕ ಸಂಪನ್ಮೂಲ ಸೀಮಿತಗೊಂಡಿದೆ. ತರಬೇತಿಗೊಂಡ ಸಿಬ್ಬಂದಿ ಅಲ್ಪ ಸಂಖ್ಯೆಯಲ್ಲಿದ್ದಾರೆ. ಆರೋಗ್ಯಾಭಿವೃದ್ಧಿಯ ಕಾರ್ಯಕ್ರಮ ವ್ಯಾಪಕ ಸಾಮಾಜಿಕ – ಆರ್ಥಿಕ ಸುಧಾರಣೆಯೊಂದಿಗೆ ಹಾಸುಹೊಕ್ಕಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಸಮಗ್ರ ಆರೋಗ್ಯ ಸೇವಾ ಸೌಲಭ್ಯ ಒದಗಿಸಲು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರಂಭಿಸುವ ಯೋಜನೆಯನ್ನು ಆರೋಗ್ಯ ಸಮೀಕ್ಷೆ ಮತ್ತು ಅಭಿವೃದ್ಧಿ ಸಮಿತಿ ರೂಪಿಸಿತು. ಆರ್ಥಿಕ ಸಂಪನ್ಮೂಲ ಮತ್ತು ತಾಂತ್ರಿಕ ಸೌಲಭ್ಯದ ಮಿತಿಯ ದೃಷ್ಟಿಯಿಂದ ಸರಕಾರವು 80 ಸಹಸ್ರದಿಂದ ಒಂದು ಲಕ್ಷ ಜನಸಂಖ್ಯೆ ಆಗುವ ಘಟಕಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಿತು. 1953 ನೇ ಇಸವಿಯಿಂದ ಈಚೆಗೆ ದೇಶದಲ್ಲಿರುವ 5003 ಅಭಿವೃದ್ಧಿ ಘಟಕಗಳಲ್ಲಿ 4937 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿವಿಧ ರಾಜ್ಯಗಳಲ್ಲಿರುವ 495 ಘಟಕಗಳಲ್ಲಿ ಆರೋಗ್ಯ ಕೇಂದ್ರಗಳಿಲ್ಲ. 1974 ನೇ ಇಸವಿಯ ವೇಳೆಗೆ ಇಲ್ಲೂ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. 497 ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳಿಲ್ಲ. ವೈದ್ಯರ ಅಭಾವ ತುಂಬಿಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಇಂದು ದೇಶದಲ್ಲಿ 23009 ಉಪ ಆರೋಗ್ಯ ಕೇಂದ್ರಗಳಿವೆ. ಪ್ರತಿ ಸಹಸ್ರ ಜನಸಂಖ್ಯೆಗೆ ಒಂದು ಉಪ ಕೇಂದ್ರದಂತೆ ದೇಶದ ಆದ್ಯಂತ ನಲವತ್ತೆರಡು ಸಾವಿರ ಉಪ ಕೇಂದ್ರಗಳು ಬೇಕಾಗುತ್ತದೆ.

SHAKTI
SUDHA

A Superb Tonic

ದೇಶದ ಹಿತಕ್ಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಆನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂಕ
2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3 ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿದಯಾ ಪ್ರಚಾರಕರು, 320 – 5 ಪಿ ಬ್ಲಾಕ್, ಜಯನಗರ, ಬೆಂಗಳೂರು
4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

ಇದೀಗ

ಮೈಸೂರು ಸರ್ಕಾರದ
ರೇಷ್ಮೆ ನೇಯ್ಗೆ
ಕಾರ್ಖಾನೆಯಿಂದ

ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು
ಮನಮೋಹಕ ನಮೂನೆಯ
ವಿಶಿಷ್ಟ ನಯಗಾರಿಕೆಯ
ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ.

•★•

ಮೈಸೂರು ಗೌರ್ನಮೆಂಟ್
ಸಿಲ್ಕ್ ವೀವಿಂಗ್ ಫ್ಯಾಕ್ಟರಿ

ಮಾನಂದವಾಡಿ ರಸ್ತೆ, ಮೈಸೂರು 4

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 10–00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಕುಟುಂಬ ಯೋಜನೆ ಪ್ರಗತಿ

ಭಾರತದ ಕುಟುಂಬ ಯೋಜನೆ ನಿಯೋಜಿತ ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಗೊಂದಿಗೆ ಸಂಪರ್ಕಿತವಾಗಿದೆ. ಮುಂದಿನ 10–12 ವರ್ಷಗಳಲ್ಲಿ ಜನಸಂಖ್ಯೆಯ ಬೆಳವಣಿಗೆಯನ್ನು ಶೇಕಡ 1.6ಕ್ಕೆ ಇಳಿಸುವುದೇ, ಆರ್ಥಿಕಾಭಿವೃದ್ಧಿ ವರ್ಷಂಪ್ರತಿ ಶೇಕಡ 6ರಂತೆ ಏರಿಸುವುದೇ ಮುಖ್ಯ ಗುರಿ ಆಗಿದೆ. ಈ ದಿಸೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಹಾಗೂ ಕುಟುಂಬ ಯೋಜನಾ ನೇತೆಗಾಗಿ ಪ್ರಾಥಮಿಕ ಆರೋಗ್ಯಕೇಂದ್ರ ಮತ್ತಾಗೂ ಉಪ ಕೇಂದ್ರಗಳನ್ನು ಸ್ಥಾಪಿಸುವುದು ಅತ್ಯಗತ್ಯ.

ಸೌಂದರ್ಯ ರಕ್ಷಣೆಯಲ್ಲಿ ಮೈಸೂರು ಶ್ರೀಗಂದದ ಸಾಬೂನಿಗಿಂತ ಮಿಗಿಲಾದ ಸಾಬೂನು ಮತ್ತೊಂದು ಇಲ್ಲ

ಈ ಅತ್ಯುತ್ತಮ ಸ್ನಾನದ ಸಾಬೂನಿನಲ್ಲಿರುವ ಶ್ರೀಗಂಧದ ಎಣ್ಣೆಯು ಚರ್ಮದ ರಕ್ಷಣೆ ಮಾಡುವುದಲ್ಲದೆ ಅದಕ್ಕೆ ಯೌವನದ ಮೆರಗನ್ನು ನೀಡುತ್ತದೆ.

ಆಯ್ಕೆಯಲ್ಲಿ ಇದಕ್ಕಿಂತ ಮಿಗಿಲಾದ ಸಾಬೂನು ಇನ್ನೊಂದಿಲ್ಲ

•★•

ಮೈಸೂರು ಸರಕಾರದ ಸಾಬೂನು ಕಾರ್ಖಾನೆ,

ಬೆಂಗಳೂರು 12

ವುಡ್‌ಲ್ಯಾಂಡ್ ಟಾಕೀಸ್ ಅಮೋಘ 4 ನೇ ವಾರ

ಅಮೋಘ ಪ್ರಾರಂಭ

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್

[ದಿನ 3 ಪ್ರದರ್ಶನಗಳು]

ಆಪೆರಾ— 23–1–70 ರಿಂದ

.... ಅತ್ಯಮೋಘ ಕನ್ನಡ ಚಿತ್ರ ....

ಭಲೇ ಕಿಲಾಡಿ

ಪಾತ್ರ : ನರಸಿಂಹರಾಜು ರಂಗ ವೆಂಕಟೇಶ್

ಕಥೆ – ಸಂಭಾಷಣೆ : ಹುಣಸೂರ್ ಕೃಷ್ಣಮೂರ್ತಿ

ನಿರ್ದೇಶನ : ಎ. ನಾಗರಾಜ್

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4

ಶ್ರೀ ರಂಗನಾಥ ದೇವಾಲಯ ಉಳಿದ ರೀತಿ

★

1328 ರಲ್ಲಿ ಆಗತಾನೇ ಸ್ಥಾಪನೆಯಾಗಿದ್ದ ವಿಜಯನಗರವು ಅತಿ ಅಲ್ಪಸ್ವಿಯಾಗಿ ಬಲಯುತ ರಾಜ್ಯವಾಗುತ್ತಿತ್ತು : ಆ ಸಾಮ್ರಾಜ್ಯ ಮಧುರೆಯಲ್ಲಿ ಸುಲ್ತಾನನ ರಾಜ್ಯಭಾರ ನಡೆಯುತ್ತಿತ್ತು.

ಶ್ರೀ ರಂಗನಾಥ ದೇವಾಲಯದಲ್ಲಿದ್ದ ಪವಿತ್ರಸ್ಥಳದಲ್ಲಿ ಪವಿತ್ರವಾದ ಶ್ರೀ ರಂಗನಾಥ ದೇವರ ವಿಗ್ರಹವನ್ನು ಒಡೆದುಹಾಕಲು ಸುಲ್ತಾನನು ನಿರ್ಧರಿಸಿದನು.

ಈ ದೈವದ್ರೋಹದಿಂದ ದೇವಾಲಯವನ್ನು ಕಾಪಾಡಲು ಯಾರು ಇಲ್ಲವಲ್ಲಾ ಎಂದು ದೇವಾಲಯದ ಸುತ್ತು ಪಟ್ಟಣದ ಜನರು ಪರಿತಪಿಸುತ್ತಿದ್ದರು. ತಮ್ಮ ಧರ್ಮ ರಕ್ಷಣೆಗಾಗಿ ಮಧುರೆಯ ಜನರು ಸಹಸ್ರ ಗಟ್ಟಲೆಯಲ್ಲಿ ಸಾಯಲು ಸಿದ್ಧರಿರಲಿಲ್ಲ. ಎಲ್ಲರೂ ನಿರಾಶೆಗೊಂಡಿದ್ದರು ಆದರೆ ಒಬ್ಬ ಪೂಜಾರಿಯು ರಹಸ್ಯವಾಗಿ, ಯಾರಿಗೂ ಕಾಣದಂತೆ, ರಾತ್ರಿಹೊತ್ತಿನಲ್ಲಿ, ದೇವರನ್ನು ಹಿಂದಿನ ಬಾಗಿಲಿಂದ ತೆಗೆದುಕೊಂಡು ಅತ್ಯಾತುರದಿಂದ ತಿರುಪತಿ ದೇವಾಲಯಕ್ಕೆ ಹೋಗಿ ಬಿಟ್ಟಿಟ್ಟನು. ಇದು ಯಾರಿಗೂ ಗೊತ್ತಾಗಲಿಲ್ಲ.

ಬೆಳಿಗ್ಗೆ ಸುಲ್ತಾನನು ವಿಗ್ರಹವನ್ನು ಧ್ವಂಸಮಾಡಲು ಬಂದಾಗ, ಖಾಲೀ ಗರ್ಭ ಗುಡಿಯನ್ನು ದಿಟ್ಟಿಸಿನೋಡಿ, ಈ ಕಿರೀಟ ಪ್ರಾಯನಾದ ದೈವದ್ರೋಹವು ತದಗೆ ದೊರೆಯಲ್ಲವಲ್ಲ ಎಂದು ವಿಪರೀತ ಕೋಪಗೊಂಡು, ವಿಗ್ರಹವು ಒಂದು ತಿಂಗಳಲ್ಲಿ ಸಿಕ್ಕದಿದ್ದರೆ, ದೇವಾಲಯವನ್ನು ನೆಲಸಮಟ್ಟ ಮಾಡಿ, ಆ ನಿವೇಶನದ ಮೇಲೆ ಮಸೀದಿ ಕಟ್ಟಲು ಕೂಡಲೇ ಆಜ್ಞೆ ಮಾಡಿದನು.

ಮತ್ತೊಬ್ಬ ಪೂಜಾರಿಯು ಈ ಬೆದರಿಕೆ ವಾರ್ತೆಯನ್ನು ವಿಜಯನಗರ ಸ್ಥಾಪಕ ಬುಕ್ಕರಾಯನಿಗೆ ತಿಳಿಸಲು ಹೋದನು. ಧರ್ಮರಕ್ಷಣೆಯು ಧಾರ್ಮಿಕ ರಾಜನ ಕರ್ತವ್ಯವೆಂದು ಬುಕ್ಕರಾಯನು ತನ್ನ ಮಗ ಕೃಷ್ಣರಾಯನ ಕಡೆ ನೋಡಿದನು. ಆವನು ಈ ಕಾರ್ಯಕ್ಕೆ ಸಂತೋಷದಿಂದ ಎದ್ದುನಿಂತನು.

ವಿಜಯನಗರದ ರಾಜಕುಮಾರದು ಬರುವನೆಂಬುದನ್ನು ಕೇಳಿದ ಸುಲ್ತಾನನು, ರಾಜಕೀಯ ಪಿತೂರಿ ಯೋಜಿಸಿದನು ಕಂಚೀ ರಾಜನು ವಿಜಯನಗರದ ವಿರೋಧಿಯೆಂದು ತಿಳಿದಿದ್ದ ಸುಲ್ತಾನನು, ಆ ಮಾರ್ಗವಾಗಿ ಬರುವ ವಿಜಯನಗರದ ಸೈನ್ಯವನ್ನು ತಡೆಗಟ್ಟಲು ಅಪಾರ ಹಣವನ್ನು ಲಂಚವಾಗಿ ಕಳುಹಿಸಿದನು ವಿಜಯನಗರದ ಸೈನ್ಯ ಬಂದಾಗ ಅದರೊಡನೆ ಕಂಚೀರಾಜ ಯುದ್ಧಮಾಡಿ ಸೋತನು. ಆತನು ವಿಜಯನಗರದೊಡನೆ ಸೇರಲು ಒಪ್ಪಿದನು ಕಂಚಿ ರಾಜನು ಸೋತ ವಾರ್ತೆ ಮಧುರೆಗೆ

ಆರ್ಥಿಕ ಅಭಿವೃದ್ಧಿಗಾಗಿ

ಇತ್ತೀಚಿನ ವರ್ಷಗಳಲ್ಲಿ ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ನಾವು ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದ್ದೇವೆ. ಕೈಗಾರಿಕ ಉತ್ಪನ್ನ, ಕೈಗಾರಿಕಾ ಸಂಸ್ಥೆಗಳನ್ನು ಸ್ಥಾಪಿಸಿ ಇದನ್ನು ಅಭಿವೃದ್ಧಿ ಪಡಿಸುವ ಸಾಮರ್ಥ್ಯ ಹಾಗೂ ತಾಂತ್ರಿಕಮಟ್ಟ ಇವುಗಳಲ್ಲಿಯೂ ಸಾಕಷ್ಟು ಅಭಿವೃದ್ಧಿಯು ಕಂಡು ಬಂದಿದೆ. ನನ್ನ ಪ್ರಗತಿಯನ್ನು ಹೊರ ದೇಶಗಳೂ ಹೆಚ್ಚಿನ ಆಸಕ್ತಿಯಿಂದ ವೀಕ್ಷಿಸುತ್ತಿವೆ. ಇತ್ತೀಚಿನ ಕೈಗಾರಿಕಾ ಪ್ರಗತಿಯಿಂದಾಗಿ ನಾವು ಹೊರದೇಶಗಳೊಂದಿಗೆ ಕೈಗಾರಿಕಾ ಪ್ರಗತಿಯಿಂದಾಗಿ ನಾವು ದೂರದೇಶಗಳೊಂದಿಗೆ ಕೈಗಾರಿಕಾ ಸಹಯೋಗಗಳನ್ನು ಕೈಗೊಳ್ಳುತ್ತಿದ್ದೇವೆ.

★

ಕೈಗಾರಿಕಾ ವಸ್ತುಗಳ ರಫ್ತು

ಚತುರ್ಥ ಯೋಜನೆಯಲ್ಲಿ ಆ - ಸಂಪ್ರದಾಯದ ವಸ್ತುಗಳ ರಫ್ತು ವ್ಯಾಪಾರವನ್ನು ಪ್ರತಿ ವರ್ಷ ಶೇಕಡ ಏಳರಷ್ಟು ಚಕ್ರವೃದ್ಧಿ ವಿಕಾಸ ದರದಲ್ಲಿ ಹೆಚ್ಚಿಸಲು ಉದ್ದೇಶಿಸಲಾಗಿದೆ. ಚಹ ಮೊದಲಾದ ಸಂಪ್ರದಾಯದ ವಸ್ತುಗಳ ರಫ್ತು ವ್ಯಾಪಾರ ಬೃಹತ್ ಪ್ರಮಾಣದಲ್ಲಿ ನಡೆಯುವುದು. 73-74 ನೇ ಸಾಲಿಗೆ ಆ - ಸಂಪ್ರದಾಯದ ವಸ್ತುಗಳ ರಫ್ತು ವ್ಯಾಪಾರವನ್ನು 500 ಕೋಟಿ ರೂಪಾಯಿಗಳಷ್ಟು ಅಭಿವೃದ್ಧಿ ಪಡಿಸಿ ಸಂಪ್ರದಾಯದ ವಸ್ತುಗಳನ್ನು ಮಾರಿಸಲು ಯತ್ನಿಸಲಾಗುವುದು.

68-69 ನೇ ಸಾಲಿನಲ್ಲಿ ಇಂಜಿನೀರಿಂಗು ವಸ್ತುಗಳು (ರೂ 85 ಕೋಟಿ) ಕಬ್ಬಿಣ ಮತ್ತು ಉಕ್ಕು (ರೂ 70 ಕೋಟಿ) ರಾಸಾಯನಿಕಗಳು (ರೂ 36 ಕೋಟಿ) ಮತ್ತು ಹದಮಾಡಿದ ತೊಗಲು ಪಾದರಕ್ಷೆ ಮತ್ತು ಇತರೆ ಚರ್ಮದ ವಸ್ತುಗಳು ರೂ 10 ಕೊಟಿ) ಮೊದಲಾದ ಅಸಂಪ್ರದಾಯದ ವಸ್ತುಗಳನ್ನು ವಿದೇಶಗಳಿಗೆ ಮಾರಲಾಯಿತು.

ದಿವ್ಯವಾಣಿ

ಯಾರು ತನ್ನ ದೇಶವನ್ನು ಅತ್ಯುತ್ತಮವಾಗಿ ಸೇವಿಸುತ್ತಾರೋ ಅವರು ತನ್ನ ಪಾರ್ಟಿಯನ್ನು ಅತ್ಯುತ್ತಮವಾಗಿ ಸೇವಿಸುತ್ತಾರೆ. — ರುಥರ್‌ಫರ್ಡ್.

ತಲಪುದಕ್ಕೆ ಮುಂಚೆ, ಇವರು ಮಧುರೆಯ ಮೇಲೆ ಶೀಘ್ರವಾಗಿ ದಂಡೆತ್ತಿಬಂದು, ಸುಲ್ತಾನನನ್ನು ಸೋಲಿಸಿ ಅವನನ್ನು ಕೊಂದರು. ರಂಗನಾಥ ದೇವಾಲಯವು ಉಳಿಯಿತು.

★

ನಾಯಿಯಲ್ಲೂ ಭಗವಂತನನ್ನು ಕಂಡ ಸಾಧು

ಶ್ರೀ ರಾಮಕೃಷ್ಣ ಪರಮಹಂಸರ ನಿಧನ ನಂತರ, ಅವರ ಶಿಷ್ಯ ಸ್ವಾಮಿ ವಿವೇಕಾನಂದರು ಭಾರತಾದ್ಯಂತದ ಯಾತ್ರೆ ಹೊರಟಾಗ ಉತ್ತರದಲ್ಲಿ, ಮುಂದೆ ತಿಳಿಸಿರುವ ಕಥೆ ಕೇಳಿದರು. 80 ವರ್ಷಗಳಿಗೂ ಹಿಂದೆ ನಡೆದದ್ದು.

ಪ್ರಸಿದ್ಧ ಪಯೋಹರಿಬಾಬರ ಶಿಷ್ಯ ಒಬ್ಬ ಸಾಧುವು ಊಟ ತಯಾರಿಸುತ್ತಿದ್ದನು. ಗುರುವು ಈತನಿಗೆ ವಿಶ್ವದ ಮೂಲಭೂತ ತತ್ವವನ್ನು – ಎಲ್ಲಾ ಪದಾರ್ಥಗಳೂ, ಎಲ್ಲಾ ಪ್ರಾಣಿಗಳೂ ದೇವಕೇಯವನ್ನು ವಿಶದಪಡಿಸುವುದಾಗಿದೆ, ಎಂದು ಬೋಧಿಸುತ್ತಿದ್ದನು. ಈ ಸತ್ಯವು ಅವನ ಮನಸ್ಸಿಗೆ ತುಂಬಾ ಹತ್ತಿ, ಅವನ ಆತ್ಮ ದೇಹದಲ್ಲೆಲ್ಲಾ ತುಂಬಿತ್ತು.

ಅವನು ಚಪಾತಿ ಸಾಗು ತಯಾರಿಸುತ್ತಿದ್ದನಾದರೂ, ಅವನ ಮನಸ್ಸು ಬೇರೆಕಡೆ ಇದ್ದಿತು. ಅವನು ತಯಾರಿಸುತ್ತಿದ್ದ ಎರಡು ಚಪಾತಿಗಳ ಅಥವಾ ಸಾಗಿನ ಕಡೆ ಇರದೆ, ಭಗವಂತನನ್ನು ಎಲ್ಲಾ ಪ್ರಾಣಿಗಳಲ್ಲೂ, ಎಲ್ಲಾ ಪುರುಷರು, ಎಲ್ಲಾ ಸ್ತ್ರೀಯರು, ಎಲ್ಲಾ ಪುರುಷರು, ಸಾಧುಗಳು, ಪಾಪಿಗಳು, ಎಲ್ಲಾ ಸೃಷ್ಟಿಯಲ್ಲೂ ಇರುವನೆಂಬ ದೊಡ್ಡ ಸತ್ಯದ ಕಡೆ ಇತ್ತು.

ಆಗ ಒಂದು ನಾಯಿಯು ಕಳ್ಳತನದಿಂದ ಬಂದು, ಒಂದು ರೊಟ್ಟಿಯನ್ನು ಕಚ್ಚಿಕೊಂಡು ಓಡಿಹೋಗುತ್ತಿತ್ತು. ಇದನ್ನು ಕಂಡ ಸಾಧುವು ಅದರ ಹಿಂದೆ ಓಡಿದನು. ತನ್ನ ಕೈಲ್ಲಿ ಏನೂ ಆಯುಧ ಹಿಡಿದುಕೊಳ್ಳಲಿಲ್ಲ. ತನ್ನಲ್ಲಿದ್ದ ಮತ್ತೊಂದು ರೊಟ್ಟಿ ತೆಗೆದುಕೊಂಡು ' ಓ ಭಗವಂತ, ಹೇ ಪ್ರಭು, ನೀನು ಏನು ಮಾಡುತ್ತಿ, ಆ ರೊಟ್ಟಿ ಅರ್ಧ ಬೆಂದಿದೆ, ತುಪ್ಪ ಸವರಿಲ್ಲ, ಆ ಒರಟು ರೊಟ್ಟಿ ತಿನ್ನಲು ನಿನ್ನ ಹಲ್ಲಿಗಳಿಗೆ ತೊಂದರೆಯಾಗುತ್ತದೆ, ದಯವಿಟ್ಟು ಈ ರೊಟ್ಟಿ ತೆಗೆದುಕೋ, ಇದಕ್ಕೆ ತುಪ್ಪ ಸವರಿದ್ದೀನೆ" ಎಂದು ಕೂಗುತ್ತಾ ಅದರ ಹಿಂದೆ ಓಡುತ್ತಿದ್ದನು. ನಾಯಿಯು ತನ್ನನ್ನು ಹೊಡೆಯುವದಕ್ಕೆ ಒರುತ್ತಾನೆಂದು ಹೆದರಿ ಮುಂದೆಮುಂದೆ ಓಡುತ್ತಿತ್ತು ; ಇವನು ಅದನ್ನು ಹಿಂಬಾಲಿಸುತ್ತಾ ' ಹೇ ಭಗವಂತ, ಹೇ ಪ್ರಭೋ, ಅದು ನಿನಗೆ ನೋವು ಉಂಟು ಮಾಡುತ್ತದೆ, ಸರಿಯಾಗಿ ತಿನ್ನಲಾಗುವುದಿಲ್ಲ " ಎಂದು ಕೂಗುತ್ತಿದ್ದನು.

ಪ್ರಖ್ಯಾತ ಶ್ರೀ ಪಯೋಹರಿಬಾಬರ ಶಿಷ್ಯನಾದ ಈ ಸಾಧುವು ತನ್ನ ಗುರುವಿನ ಬೋಧನೆಯಂತೆ ನಡೆಯುತ್ತಿದ್ದನು.

— ಗಣರಾಜ್ಯ ದಿನೋತ್ಸವ ಶುಭಾಶಯಗಳು —

ಮೈಸೂರಿನಲ್ಲಿದ್ದಾಗ
ಇಲ್ಲಿ ತಂಗಿರಿ

ಹೊಟೇಲ್ ಸುಜಾತ

ಎಲ್ಲ ಆಧುನಿಕ ಸೌಕರ್ಯಗಳನ್ನೊಳಗೊಂಡ
ಏಕೈಕ ಸುಖಕರವಾದ ಹೊಟೇಲ್

ಫೋನ್ : 22211 ತಂತಿ : ಕಂಫರ್ಟ್

★ ಎಲ್ಲ ಕೋಣೆಗೂ ಪ್ರತ್ಯೇಕ ಅಟಾಚ್ಡ್ ಬಾತ್ ಮತ್ತು ಫೋನ್
★ ಸಭೆ ಸಮಾರಂಭ ಆವರಣ, ವಿಶಾಲ ಲಾನ್ಸ್, ರೂಫ್‌ಗಾರ್ಡನ್
★ ಕೂಟ ಮತ್ತು ಮದುವೆಗಳಿಗೆ ಬಾಂಬು ಮನೆ
★ ಸೊಗಸಾದ ತಯಾರಿಕೆ
★ ಚುರುಕಾದ ಮತ್ತು ವಿನಯಪೂರ್ವಕ ಸೇವೆ

★

.... ಶುಚಿ ರುಚಿ ಉಪಹಾರ ಮತ್ತು ಭೋಜನಕ್ಕೆ ....

ಚಂದ್ರಕಳೆ

ಫೋನ್ : 23280